ಬೆಂಗಳೂರು
ನಗರ ವಿಶ್ವವಿದ್ಯಾನಿಲಯ

BENGALURU
CITY UNIVERSITY

Office of the Registrar, Central College Campus, Dr. B.R. AmbedkarVeedhi, Bengaluru – 560 001.
PhNo.080-22131385, E-mail: registrarbcu@gmail.com

ಸಂ.ಬೆಂನವಿ/ಶೈ.ವಿ/ಆನರ್ಸ/ /2024–25 ದಿನಾಂಕ:08.10.2024

## ಅಧಿಸೂಚನೆ

ವಿಷಯ: 2021–22 ನೇ ಸಾಲಿನಲ್ಲಿ ಎನ್.ಇ.ಪಿ. ಆಧಾರಿತ ವ್ಯಾಸಂಗ ಕ್ರಮಗಳ ಪ್ರಕಾರ ಅಧ್ಯಯನ ಮಾಡಿದ ವಿದ್ಯಾರ್ಥಿಗಳಿಗೆ ದಿನಾಂಕ 08.05.2024ರ ಸರ್ಕಾರದ ಆದೇಶದ ಪ್ರಕಾರ 2024–25ನೇ ಸಾಲಿನಲ್ಲಿ 4ನೇ ವರ್ಷದ ಆನರ್ಸ ವ್ಯಾಸಂಗಕ್ಕೆ ಅನುಮತಿ ನೀಡುವದು ಹಾಗೂ ಪ್ರವೇಶಕ್ಕೆ ನಿಗದಿ ಪಡಿಸಿದ ಅರ್ಹತಾ ಮಾನದಂಡಗಳು.

ಉಲ್ಲೇಖ 1. ಸರ್ಕಾರದ ಆದೇಶ ಸಂಖ್ಯೆ: ಇಡಿ 166 ಯುಎನ್ಇ 2023 ದಿನಾಂಕ. 08.05.2024

2. ಈ ಕಛೇರಿ ಅಧಿಸೂಚನೆ ಸಂ. ಸಂ. ಬೆಂನವಿ/ಶೈ.ವಿ/ಆನರ್ಸ/ / 2024–25 ದಿನಾಂಕ:24.09.2024

****

ರಾಜ್ಯ ಶಿಕ್ಷಣ ನೀತಿ ಆಯೋಗದ ಮಧ್ಯಂತರ ವರದಿಯ ಆಧಾರದ ಮೇಲೆ ಹೊರಡಿಸಿದ ಉಲ್ಲೇಖ (1) ಆದೇಶದಲ್ಲಿ 2021–22 ಪೂರ್ವದಲ್ಲಿ ಇದ್ದ ವ್ಯವಸ್ಥೆಯಂತೆ ಮೂರು ವಿಷಯಗಳನ್ನು ಒಳಗೊಂಡ ಮೂರು ವರ್ಷದ ಪದವಿ ವ್ಯಾಸಂಗವನ್ನು 2024–25ನೇ ಸಾಲಿನಿಂದ ಜಾರಿಗೊಳಿಸಲಾಗಿದೆ. ಪ್ರಸ್ತಾಪಿತ ಆದೇಶದಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ (ಎನ್.ಇ.ಪಿ–2020) ಅಡಿಯಲ್ಲಿ ರಚಿಸಲಾದ ಪರಿನಿಯಮಗಳ ಪ್ರಕಾರ 2021–22, 2022–23, 2023–24 ಸಾಲಿನಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳು 3ವರ್ಷ ವ್ಯಾಸಂಗ ಪೂರೈಸಿದ ನಂತರ 4ನೇ ವರ್ಷದ ಆನರ್ಸ ವ್ಯಾಸಂಗ ಮುಂದುವರೆಸಲು ಅನುಮತಿ ನೀಡಲಾಗಿದೆ. ಅದರಂತೆ, ಉಲ್ಲೇಖ (2)ರ ವಿಶ್ವವಿದ್ಯಾನಿಲಯದ ಅಧಿಸೂಚನೆಯನ್ನು ಹೊರಡಿಸಿ ಆಯ್ದ ಮಹಾವಿದ್ಯಾಲಯಗಳಿಗೆ 2021–22ನೇ ಸಾಲಿನಿಂದ ಜಾರಿಗೊಳಿಸಲಾಗಿದ್ದ ರಾಷ್ಟ್ರೀಯ ಶಿಕ್ಷಣ ನೀತಿ (ಎನ್.ಇ.ಪಿ–2020) ಪ್ರಕಾರ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ.

ಉಲ್ಲೇಖ (2)ರ ವಿಶ್ವವಿದ್ಯಾನಿಲಯದ ಅಧಿಸೂಚನೆಯಲ್ಲಿ, 4ನೇ ವರ್ಷದ ಆನರ್ಸ ವ್ಯಾಸಂಗ ಮುಂದುವರೆಸಲು ಆಸಕ್ತಿ ವ್ಯಕ್ತಪಡಿಸಿರುವ ವಿದ್ಯಾರ್ಥಿಗಳ ಹಾಗೂ ವ್ಯಾಸಂಗದ ವ್ಯವಸ್ಥೆ ಮಾಡಲು ಸಿದ್ಧರಿರುವ ಮಹಾವಿದ್ಯಾಲಯಗಳು ಸಲ್ಲಿಸಿರುವ ಮಾಹಿತಿಯನ್ನು ಪರಿಗಣಿಸಿ ಕೆಳಕಂಡ ಮಹಾವಿದ್ಯಾಲಯಗಳಿಗೆ ಅವುಗಳ ಮುಂದೆ ನಮೂದಿಸಿರುವ ವಿಷಯ/ಕೋರ್ಸುಗಳಲ್ಲಿ 4ನೇ ವರ್ಷದ ಆನರ್ಸ್ ವ್ಯಾಸಂಗವನ್ನು ಪ್ರಾರಂಭಿಸಲು ಅನುಮತಿ ನೀಡಲಾಗಿದೆ.

ಸದರಿ ಅಧಿಸೂಚನೆಯ ಖಂಡಿಕೆ 4ರ ಕ್ರಮ ಸಂ.9 ರಲ್ಲಿ ನಮೂದಿಸಿದ ಎಂ.ಎಸ್. ರಾಮಯ್ಯ ಮಹಾವಿದ್ಯಾಲಯಕ್ಕೆ ಅನುಮತಿಸಲಾದ ಬಿ.ಎಸ್ಸಿ. ಬಯೋಟೆಕ್ನಾಲಜಿ ಜೊತೆಗೆ ಬಿ.ಎಸ್ಸಿ. ಮೈಕ್ರೋಬಯಾಲಜಿ ವಿಷಯವನ್ನೂ ಸೇರಿಸಿ ಅಧಿಸೂಚನೆಗೆ ಅಂಶಿಕ ಬದಲಾವಣೆ ಮಾಡಿ ಅನುಮೋದನೆ ನೀಡಲಾಗಿದೆ.

ಮುಂದುವರೆದು, ಅಧಿಸೂಚನೆಯಲ್ಲಿ ಅನುಮತಿಸಲಾದ ಆನರ್ಸ ವ್ಯಾಸಂಗಗಳಿಗೆ ಸಂಬಂಧಿಸಿದಂತೆ, ಎನ್.ಇ.ಪಿ. ಪರಿನಿಯಮಾವಳಿಗಳ ಪ್ರಕಾರ 4ನೇ ವರ್ಷದ ಆನರ್ಸ ಕೋರ್ಸುಗಳ ಪ್ರವೇಶಕ್ಕೆ ನಿಗದಿಪಡಿಸಲಾದ ಅರ್ಹತಾ ಮಾನದಂಡಗಳು ಕೆಳಗಿನಂತಿವೆ.

ಪು.ತಿ.ನೋ

A candidate who successfully completes a three year Bachelor's Degree, with a minimum CGPA of 7.5 and wishes to pursue the fourth year of the undergraduate programme by research, shall be allowed to continue the programme with Research to obtain the Bachelor's degree with honours by research, while other candidates may continue their studies in the fourth year of the undergraduate programme with or without a research project along with other courses as prescribed for the programme to complete their Bachelor's degree with honours.

ಮೇಲೆ ನಮೂದಿಸಿದ ಅರ್ಹತಾ ಮಾನದಂಡಗಳನ್ನು ಹಾಗೂ ಅಧಿಸೂಚನೆಯಲ್ಲಿ ಸೇರಿಸಲಾದ ಬಿ.ಎಸ್ಸಿ.ಮೈಕ್ರೋಬಯಾಲಜಿ ವಿಷಯಗಳನ್ನು ಸಂಬಂಧಿಸಿದ ಮಹಾವಿದ್ಯಾಲಯಗಳ ಗಮನಕ್ಕೆ ಮತ್ತು ಅನುಪಾಲನೆಗೆ ಪ್ರಕಟಿಸಲಾಗಿದೆ.

ಕುಲಸಚಿವರು

ಪ್ರತಿ:

1. ಮೇಲೆ ನಮೂದಿಸಿದ ಮಹಾವಿದ್ಯಾಲಯಗಳ ಪ್ರಾಂಶುಪಾಲರುಗಳಿಗೆ ಬೆಂ.ನ.ವಿ
2. ಕುಲಸಚಿವರು(ಮೌಲ್ಯಮಾಪನ), ಬೆಂ.ನ.ವಿ
3. ವಿತ್ತಾಧಿಕಾರಿಗಳು, ಬೆಂ.ನ.ವಿ
4. ಕುಲಪತಿ/ಕುಲಸಚಿವರ ಆಪ್ತ ಕಾರ್ಯದರ್ಶಿಗಳು, ಬೆಂ.ನ.ವಿ
5. ವಿಶ್ವವಿದ್ಯಾನಿಲಯದ ಜಾಲತಾಣದಲ್ಲಿ ಪ್ರಕಟಿಸಲು
6. ಕಛೇರಿ ಪ್ರತಿ